ಸಿ.ಸಿ. ನಂಬರ್ಃ **466/2015**
ಸಿ.ಡಬ್ಲ್ಯು: **12** ಪಿ.ಡಬ್ಲ್ಯು: **12**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್ಃ **466/2015**

| | |
|---|---|
| ಸಾಕ್ಷಿಯ ಹೆಸರು | : ಜಗದೀಶ |
| ತಂದೆಯ ಹೆಸರು | : ಉತ್ತಮ ಪಾಲಂಕರ್ |
| ವಯಸ್ಸು | : 56 ವರ್ಷ |
| ಉದ್ಯೋಗ | : ಅಕ್ಕಸಾಲಿಗ |
| ವಾಸಸ್ಥಳ | : ಗಾಂಧಿಚೌಕ, ಧಾರವಾಡ |

ದಿಃ **20-02-2026** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

1. ನಾನು ಈ ಪ್ರಕರಣದಲ್ಲಿ ನನ್ನ ಹೇಳಿಕೆಯನ್ನು ತನಿಖಾಧಿಕಾರಿಯ ಮುಂದೆ ನೀಡಿರುತ್ತೇನೆ. ಸಾಕ್ಷಿಯು ನಿಪಿ.5 ಜಪ್ತಿ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ19-11-2014 ರಂದು ಮಾಡಿರುತ್ತೇನೆ. ಪೋಲಿಸರು ನನಗೆ ಬಂಗಾರವನ್ನು ತೂಕ ಮಾಡುವಂತೆ ಹೇಳಿದ ಮೇರೆಗೆ ನಾನು ತೂಕ ಮಾಡಿರುತ್ತೇನೆ. ಆ ದಿನ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ವಿದ್ಯಾಗಿರಿ ಠಾಣೆಯಲ್ಲಿ ಅದನ್ನು ತೂಕ ಮಾಡಿರುತ್ತೇನೆ. ನಾನು ತೂಕ ಮಾಡಿದ ಬಂಗಾರದ ಚೈನ್ ತುಂಡು ತುಂಡಾದ 27 ಗ್ರಾಂ ಇತ್ತು. ಮತ್ತೊಂದು ಬಂಗಾರದ ಚೈನ್ 26 ಗ್ರಾಂ ಇತು. ಮತ್ತೊಂದು ಬಂಗಾರದ ಚೈನ್ 41 ಗ್ರಾಂ 4 ಮಿಲಿ ಇತ್ತು. ಇನ್ನು ಬೇರೆ ಬೇರೆ ಬಂಗಾರದ ಆಭರಣಗಳನ್ನು ತೂಕ ಮಾಡಿದ್ದೆ. ಅವು ಬೇರೆ ಬೇರೆ ಪ್ರಕರಣಕ್ಕೆ ಸಂಬಂಧಿಸಿದ್ದು ಇರುತ್ತವೆ.

2. ಸಾಕ್ಷಿಗೆ ನಿಪಿ.2 ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ. ಸದರಿ ಪೋಟೋದಲ್ಲಿ ಇರುವ ಬಂಗಾರದ ಚೈನ್ ಈ ಪ್ರಕರಣಕ್ಕೆ ಸಂಬಂಧಿಸಿರುತ್ತದೆ. ಸದರಿ ಪಂಚನಾಮೆ ಮಧ್ಯಾಹ್ನ ಊಟದ ಸಮಯ ಆಗಿತ್ತು. ನಿಖರವಾದ ಸಮಯ ನೆನಪಿಲ್ಲ. ಸದರಿ ಬಂಗಾರವನ್ನು ಯಾರು ಹಾಜರು ಪಡಿಸಿದರು ಎಂದು ನನಗೆ ಗೊತ್ತಿಲ್ಲ.

***(****ಈ ಹಂತದಲ್ಲಿ ಮಾನ್ಯ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು**.)***

ಪಾಟೀಸವಾಲುಃ ಶ್ರೀ.ಸ.ಸ.ಅ. ಅವರಿಂದಃ

**1.** ಆರೋಪಿ ನಂ.1 ಮತ್ತು 2 ರವರ ಹೇಳಿಕೆಯ ಮೇರೆಗೆ ನವನಗರದಲ್ಲಿನ ಎರಡನೇ ಕ್ರಾಸ್ ದಲ್ಲಿ ಇರುವ ಮಣಿಪುರಂ ಫೈನಾನ್ಸದಲ್ಲಿ ಅಡವಿಟ್ಟಿದ್ದ ಬಂಗಾರವನ್ನು ಚಾಸಾ.11 ರವರು ಹಾಜರು ಪಡಿಸಿದರು. ಅದನ್ನು ನಾನು ತೂಕ ಮಾಡಿದ್ದೇನೆ ಎಂದರೆ ಸರಿ. ಬೆಳಗ್ಗೆ 11.40 ರಿಂದ ಮಧ್ಯಾಹ್ನ 1.40 ರವರೆಗೆ ದಿಃ19-11-2014 ರಂದು ಮಾಡಲಾಗಿದೆ ಎಂದರೆ ಸರಿ. ಆ ದಿನ ಆರೋಪಿ ನಂ.1 ಮತ್ತು 2 ರವರು ಹೇಳಿದ ಮೇರೆಗೆ ಚಾಸಾ.11 ರವರು ಬಂಗಾರ ಹಾಜರು ಪಡಿಸಿದರು. ಅದನ್ನು ನಾನು ತೂಕ ಮಾಡಿರುತ್ತೇನೆ ಎಂದರೆ ಸಾಕ್ಷಿಯ ಪೋಲಿಸರು ಬಂಗಾರವನ್ನು ಕೊಟ್ಟಿದ್ದರು ಅದನ್ನು ತೂಕ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಆ ದಿನ ಆರೋಪಿ ನಂ.1 ಮತ್ತು 2 ರವರು ಹಾಜರು ಇದ್ದರು ಎಂದರೆ ಸರಿಯಲ್ಲ. ಆರೋಪಿ ನಂ.1 ಮತ್ತು 2 ರವರು ಹಾಜರು ಇದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಏನು ಇಲ್ಲವೆಂದು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲ.

ಸಿ.ಸಿ. ನಂಬರ್‌ಃ **466/2015**
ಸಿ.ಡಬ್ಲ್ಯುಃ **12** ಪಿ.ಡಬ್ಲ್ಯುಃ **12**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.